# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 67 (104) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ (ಪದವೀದರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 17.08.2026 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಏಕೀಕೃತ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನಲ್ಲಿರುವ ಹೆಚ್ಚುವರಿ ಕಾರ್ಯಭಾರದ ಅವಧಿ ಎಷ್ಟು? ವಿಷಯವಾರು ಕಾರ್ಯಭಾರ ಅವಧಿ ಮತ್ತು ಅವಶ್ಯವಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ನೀಡುವುದು; | (ಕೆಳಗಿನ ಕೋಷ್ಟಕ) |

| ವಿಷಯ | ಒಟ್ಟು ಕಾರ್ಯಭಾರ | ಖಾಯಂ ಅಧ್ಯಾಪಕರ ಸಂಖ್ಯೆ | ಖಾಯಂ ಅಧ್ಯಾಪಕರ ಹಂಚಿಕೆಯಾದ ಕಾರ್ಯಭಾರ | ಹೆಚ್ಚುವರಿ ಕಾರ್ಯಭಾರ | ಅವಶ್ಯವಿರುವ ಅತಿಥಿ ಉಪನ್ಯಾಸಕರ ಸಂಖ್ಯೆ |
|---|---|---|---|---|---|
| ಕನ್ನಡ | 193 | 04 | 46 | 147 | 10 |
| ಇಂಗ್ಲೀಷ್ | 132 | 0 | 0 | 132 | 09 |
| ಹಿಂದಿ | 12 | 0 | 0 | 12 | 1 |
| ಇತಿಹಾಸ | 122 | 0 | 0 | 122 | 09 |
| ಅರ್ಥಶಾಸ್ತ್ರ | 100 | 02 | 22 | 78 | 6 |
| ರಾಜ್ಯಶಾಸ್ತ್ರ | 106 | 01 | 16 | 90 | 6 |
| ಸಮಾಜ ಶಾಸ್ತ್ರ | 69 | 03 | 38 | 31 | 2 |
| ಮನೋವಿಜ್ಞಾನ | 104 | 1 | 20 | 84 | 5 |
| ಅಪರಾಧ ಶಾಸ್ತ್ರ | 47 | 0 | 0 | 47 | 3 |
| ಭೂಗೋಳ ಶಾಸ್ತ್ರ | 108 | 0 | 0 | 108 | 6 |
| ಭೌತ ಶಾಸ್ತ್ರ | 67 | 03 | 60 | 07 | 1 |
| ರಸಾಯನಶಾಸ್ತ್ರ | 111 | 0 | 0 | 111 | 6 |
| ಗಣಿತ ಶಾಸ್ತ್ರ | 99 | 01 | 20 | 79 | 5 |
| ಸಸ್ಯ ಶಾಸ್ತ್ರ | 55 | 0 | 0 | 55 | 3 |
| ಪ್ರಾಣಿ ಶಾಸ್ತ್ರ | 55 | 0 | 0 | 55 | 3 |
| ಪರಿಸರ ಅಧ್ಯಯನ | 24 | 0 | 0 | 24 | 2 |
| ವಾಣಿಜ್ಯ ಶಾಸ್ತ್ರ | 344 | 02 | 32 | 312 | 21 |
| ನಿರ್ವಹಣಾ ಶಾಸ್ತ್ರ | 61 | 0 | 0 | 61 | 4 |
| ಗಣಕವಿಜ್ಞಾನ | 944 | 01 | 20 | 924 | 49 |
| ದೈಹಿಕ ಶಿಕ್ಷಣ ವಿಭಾಗ | 19 | 0 | 0 | 19 | 1 |
| ಗ್ರಂಥಾಲಯ | 19 | 0 | 0 | 19 | 1 |
| **2026-27 ನೇ ಸಾಲಿಗೆ ಅವಶ್ಯವಿರುವಒಟ್ಟುಅತಿಥಿಉಪನ್ಯಾಸಕರ ಸಂಖ್ಯೆ** | | | | | **153** |

| | | |
|---|---|---|
| **(ಅ)** | ಪ್ರಸಕ್ತ ಶೈಕ್ಷಣಿಕ ಅವಧಿಗೆ ಮಂಡ್ಯ ವಿಶ್ವವಿದ್ಯಾಲಯಕ್ಕೆ ಅತಿಥಿ ಉಪನ್ಯಾಸಕರನ್ನು ಸದರಿ ವಿಶ್ವವಿದ್ಯಾಲಯದಿಂದಲೇ ನೇಮಿಸಿ ವೇತನವನ್ನು ಪಾವತಿಸಲಾಗುತ್ತಿದ್ದೆಯೇ, ಅಥವಾ ಈ ಹಿಂದಿನಂತೆ ಕಾಲೇಜು ಶಿಕ್ಷಣ ಇಲಾಖೆ (DCE) ವತಿಯಿಂದಲೇ ಹೆಚ್ಚುವರಿ ಕಾರ್ಯಭಾರದ ಅವಧಿಗೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿ, ಮಾಸಿಕ ವೇತನವನ್ನು ಪಾವತಿಸಲಾಗುವುದೇ ಮಾಹಿತಿ ನೀಡುವುದು; | 2026-27ನೇ ಸಾಲಿಗೆ ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ಅವಶ್ಯವಿರುವ ಅತಿಥಿ ಉಪನ್ಯಾಸಕರುಗಳನ್ನು ಆಯಾ ವಿಶ್ವವಿದ್ಯಾಲಯಗಳ ಹಂತದಲ್ಲಿಯೇ ನೇಮಿಸಿಕೊಂಡು ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುತ್ತಿರುವ ಶುಲ್ಕದಲ್ಲಿ ವೇತನ ಪಾವತಿಸಲು ಕ್ರಮ ಕೈಗೊಳ್ಳುವಂತೆ ಸರ್ಕಾರವು ಸೂಚಿಸಿದೆ. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಮಂಡ್ಯ ವಿಶ್ವವಿದ್ಯಾಲಯ ವ್ಯಾಪ್ತಿಗೊಳಪಡುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರುಗಳನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು ನಿಯಮಾನುಸಾರ ತಮ್ಮ ಹಂತದಲ್ಲಿಯೇ ಗೌರವಧನವನ್ನು ಪಾವತಿಸುವ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದ್ದು, ಅದರಂತೆ ಮಂಡ್ಯ ವಿಶ್ವವಿದ್ಯಾಲಯವು ಕ್ರಮಕೈಗೊಳ್ಳಬೇಕಿರುತ್ತದೆ. |
| **(ಇ)** | ಇದ್ದಲ್ಲಿ ಮಾಸಿಕ ವೇತನ ಪಾವತಿಸಲು ಬೇಕಾಗಬಹುದಾದ ಅಂದಾಜು ಮೊತ್ತ ಎಷ್ಟು ಹಾಗೇ ಒಂದು ಶೈಕ್ಷಣಿಕ ಸಾಲಿಗೆ ಭರಿಸಲು ಬೇಕಾಗಬಹುದಾದ ಒಟ್ಟಾರೆ ಮೊತ್ತ ಎಷ್ಟು: (ವಿವರ ನೀಡುವುದು) | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ವತಿಯಿಂದ ಪ್ರತಿ ಶೈಕ್ಷಣಿಕ ವರ್ಷದ 10 ತಿಂಗಳ ಅವಧಿಗೆ ಸುಮಾರು 150 ರಿಂದ 170 ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಲಾಗುತ್ತಿದ್ದು, ಯು.ಜಿ.ಸಿ ವಿದ್ಯಾರ್ಹತೆ ಮತ್ತು ಸೇವಾ ಅನುಭವದ ಆಧಾರದ ಮೇಲೆ ರೂ.35,000/- ದಿಂದ ಗರಿಷ್ಠ 40,000/- ವರೆಗೆ ಗೌರವಧನವನ್ನು ಪಾವತಿಸಲಾಗುತ್ತಿದ್ದು ಮಾಹೆಯಾನ ರೂ. 60,00,000=00 (ಅರವತ್ತು ಲಕ್ಷ) ರೂಪಾಯಿಗಳ ಅನುದಾನದ ಅವಶ್ಯಕತೆಯಿದ್ದು, ಒಂದು ಶೈಕ್ಷಣಿಕ ಸಾಲಿಗೆ ಆರು ಕೋಟಿ ರೂಪಾಯಿಗಳ ಅನುದಾನ ಅಗತ್ಯವಿದೆ. |

| | | |
|---|---|---|
| (ಈ) | ಮಂಡ್ಯ ವಿಶ್ವವಿದ್ಯಾಲಯಕ್ಕೆ, ಕಾಯಂ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆಯೇ; ಇಲ್ಲದಿದ್ದರೆ ಯಾವಾಗ ಚಾಲನೆ ನೀಡಲಾಗುವುದು?<br>(ಸಂಪೂರ್ಣ ಮಾಹಿತಿ ನೀಡುವುದು) | ಮಂಡ್ಯ ವಿಶ್ವವಿದ್ಯಾಲಯಕ್ಕೆ ಬೋಧಕ-62 ಮತ್ತು ಬೋಧಕೇತರ-253 ಹುದ್ದೆಗಳು ಮಂಜೂರಾಗಿದ್ದು, ಇದುವರೆವಿಗೂ ಯಾವುದೇ ಹುದ್ದೆಗಳು ಭರ್ತಿಯಾಗಿರುವುದಿಲ್ಲ. ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ 2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-121ರಲ್ಲಿ ರಾಜ್ಯದ ಸರ್ಕಾರಿ ವಿಶ್ವವಿದ್ಯಾನಿಲಯಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಲ್ಲಿ 1000 ಹುದ್ದೆಗಳನ್ನು ಹಂತ ಹಂತವಾಗಿ ತರ್ಕಬದ್ಧಗೊಳಿಸಿದ ನಂತರ ಭರ್ತಿ ಮಾಡಲಾಗುವುದು ಎಂದು ಘೋಷಿಸಿದ್ದು ಪ್ರಸ್ತುತ ಈ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. |

**ಸಂಖ್ಯೆ: ಇಡಿ/436/ಯುಆರ್‌ಸಿ/2026**

**( ಬಸವರಾಜ ರಾಯರೆಡ್ಡಿ )**
ಉನ್ನತ ಶಿಕ್ಷಣ ಸಚಿವರು